(ಇಂದು ದಿನಾಂಕಃ 24-01-2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು ಶ್ರೀ ವಿ.ಎನ್.ಎಮ್ ಎದುರುದಾರ ಪರ ವಕೀಲರಿಂದಃ**

1. ಅಪಘಾತವು ದಿಃ 26-02-2022 ರಂದು ಆಗಿದೆ. ನಾನು ನಮ್ಮ ಊರಿಗೆ ಮೋಟರ ಸೈಕಲನಲ್ಲಿ ಹೋಗುತ್ತಿದ್ದಾಗ ಅಪಘಾತ ಆಗಿದೆ. ನನ್ನ ಜೊತೆ ಮಲ್ಲಿಕಾರ್ಜುನ ತಂದೆ ಚೌಡಪ್ಪ ಮತ್ತು ನಾನು ಹೋಗುತ್ತಿದ್ದೆವು. ಗಾಡಿ ಮಲ್ಲಿಕಾರ್ಜುನ ನಡೆಸುತ್ತಿದ್ದ. ಗಾಡಿ ನಂಬರ ಕೆ.ಎ 32 ಎಚ ಬಿ 1004 ಇರುತ್ತದೆ. ಅಪಘಾತವು ಕಟ್ರೋಲ್ಲಿ ಕ್ರಾಸ ಹತ್ತಿರ ಆಗಿದೆ. ಅಪಘಾತದಿಂದ ನಾನು ಮತ್ತು ಮಲ್ಲಿಕಾರ್ಜುನ ಇಬ್ಬರು ಗಾಡಿಯಿಂದ ಬಿದ್ದಿರುತ್ತೇವೆ ಎಂದರೆ ಸರಿ. ಮಲ್ಲಿಕಾರ್ಜುನ ರವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಮಲ್ಲಿಕಾರ್ಜುನರವರು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳದಿಂದ ನನನ್ನು ಯ್ಯಾಂಬ್ಯುಲೆನ್ಸನಲ್ಲಿ ಕರೆದುಕೊಂಡು ಹೋದರು. ನನ್ನ ಜೊತೆ ಯ್ಯಾಂಬ್ಯುಲೆನ್ಸನಲ್ಲಿ ಮಲ್ಲಿಕಾರ್ಜುನ ಬರಲಿಲ್ಲ. ನನ್ನನ್ನು ಆಸ್ಪತ್ರೆಗೆ ರಾಮಣ್ಣ ಹಣಮಂತರಾವ ಪಾಟೀಲ, ಹಣಮಂತ ರಾಮಣ್ಣ ಕಣಗಿ ಇವರಿಬ್ಬರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತದ ಸಮಯದಲ್ಲಿ ಮಲ್ಲಿಕಾರ್ಜುನರವರು ನನ್ನ ಜೊತೆ ಇದ್ದರು ಅವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ ಎಂದು ದೂರಿನಲ್ಲಿ ಬರೆಸಿರುತ್ತೇನೆ ಆದರೆ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡರು ಎಂದು ದೂರಿನಲ್ಲಿ ಬರೆದಿಲ್ಲ. ದಿಃ 26-02-2022 ರಂದು ನಾನು ಮಲ್ಲಿಕಾರ್ಜುನರವರ ಜೊತೆ ಗಾಡಿ ನಂಬರ ಕೆ.ಎ 32 ಎಚ ಬಿ 1004 ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನೇ ಯಾವುದೊ ವಾಹದಿಂದ ಬಿದ್ದು ಗಾಯ ಮಾಡಿಕೊಂಡು ಗಾಡಿ ನಂಬರ ಕೆ.ಎ 32 ಎಚ ಬಿ

1004 ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-5ರ ಪ್ರಕಾರ ವಾಹನವು ಸಂಪೂರ್ಣವಾಗಿ ಜಖಂ ಆಗಿದೆ ಎಂದರೆ ಸರಿ. ಅಪಘಾತದಿಂದ ಗಾಡಿ ಎಡಗಡೆ ಭಾಗಕ್ಕೆ ಬಿದ್ದಿರುತ್ತದೆ. ಗಾಡಿ ಜೊತೆ ನಾನು ಬಿದ್ದು ನನ್ನ ಬಲಗಾಲಿಗೆ ಗಾಯ ಆಗಿರುತ್ತದೆ. ಅಪಘಾತ ಆದ ನಂತರ ನಾನು ಯುನೈಟೆಡ ಆಸ್ಪತ್ರೆಗೆ ಹೋಗಿರುತ್ತೇನೆ. ದಿಃ20-06-2022ರಂದು ಯುನೈಟೆಡ ಆಸ್ಪತ್ರೆಗೆ ಹೋಗಿರುತ್ತೇನೆ ಅಲ್ಲಿ ಒಂದು ವಾರ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ಎಮ ಎಲ್ ಸಿ ಮಾಡಿಸಿರುತ್ತಾರಾ ಇಲ್ಲವೊ ಎಂದು ನನಗೆ ಗೊತ್ತಿಲ್ಲ, ರಾಮಣ್ಣ ಎಂಬುವವರು ನನ್ನನ್ನು ಅಡಮಿಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇತ್ತು. ನಾನು ದೂರನ್ನು 1 ದಿನ ತಡವಾಗಿ ಏಕೆ ಆಯಿತು ಎಂದು ಕಾರಣ ಬರೆದಿಲ್ಲ ಎಂದರೆ ಸಾಕ್ಷಿ ನಾನು ಆಪ್ಪತ್ರೆಯಲ್ಲಿ ಇದ್ದೆ ಎಂದು ಹೇಳುತ್ತಾರೆ. ನಿ.ಪಿ-2ರ ಪ್ರಕಾರ ಎಮಎಲ್ಸಿ ದಿಃ21-06-2022ರಂದು ಆಗಿದೆ ಎಂದರೆ ಸರಿ. ಯುನೈಟೆಡ ಆಸ್ಪತ್ರೆಯಲ್ಲಿ ನಾನು ಒಂದು ವಾರ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದು ಸಂಪೂರ್ಣವಾಗಿ ಗುಣವಾಗಿ ಬಂದಿರುತ್ತೇನೆ ಎಂದರೆ ಸಾಕ್ಷಿ ಇನ್ನು ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಾಲಿಗೆ ಹಾಕಿದ ರಾಡನ್ನು ಈಗ ತೆಗೆದಿರುತ್ತಾರೆ ಎಂದರೆ ಸರಿ. ಅಪಘಾತ ಆದಾಗ ನನಗೆ 41 ವರ್ಷ ಆಗಿತ್ತು. ನಾನು ಕಿರಾಣಿ ಅಂಗಡಿ ನಡೆಸುತ್ತೇನೆ. ನನ್ನ ಅಂಗಡಿ ಕೊಡ್ಲಿ ಗ್ರಾಮದಲ್ಲಿ ಇರುತ್ತದೆ. ಈಗಲು ಕಿರಾಣಿ ಅಂಗಡಿ ನಡೆಸುತ್ತಿದ್ದೇನೆ. ನಾನು ಅಪಘಾತದ ಸಮಯದಲ್ಲಿ ಅಂಗಡಿ ಕೆಲಸ ಮಾಡುತ್ತಿದ್ದು ತಿಂಗಳಿಗೆ ರೂ.20 ಸಾವಿರಗಳಿಸುತ್ತಿದ್ದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಸೃಷ್ಟಿಸಿ

ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರದ ಹಣ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.